ದಿನಾಂಕ **07-08-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ಅಸಲು ದಾವಾ ಸಂ.13/2017 ರಲ್ಲಿ ಆದ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ನಾನು ಅರ್ಜಿಸಲ್ಲಿಸಿರುತ್ತೇನೆ ಎಂದರೆ ಸರಿ. ದಿಃ28.10.2017 ರಲ್ಲಿ ನ್ಯಾಯಾಲಯದ ಆದೇಶ ಆಗಿರುತ್ತದೆ. ನ್ಯಾಯಾಲಯದಲ್ಲಿ ಆದ ಆದೇಶ ಅದೇ ದಿನ ಗೊತ್ತಾಗಿರುತ್ತದೆ. ನ್ಯಾಯಾಲಯದ ಆದೇಶವನ್ನು 3-4 ದಿವಸದ ನಂತರ ಪಡೆದಿರುತ್ತೇನೆ. ಕ್ರಿಮಿನಲ್ ಪ್ರಕರಣ 124/2017 ನ್ನು ಯಾವಾಗ ನೊಂದಣಿ ಮಾಡಿಸಿರುತ್ತೇನೆ ಎಂದು ನನಗೆ ನೆನಪಿಲ್ಲ . ಕ್ರಿಮಿನಲ್ ಪ್ರಕರಣ 124/2017 ರ ದೂರಿನ ಆದಾರದಲ್ಲಿ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಪೊಲೀಸರಿಗೆ ದೂರು ನೀಡುವಾಗ ನ್ಯಾಯಾಲಯ ಆದೇಶದ ಪ್ರತಿಯನ್ನು ನೀಡಿರುತ್ತೇನೆ. ನ್ಯಾಯಾಲಯದಿಂದ ಆದೇಶ ಪಡೆದ 1-2 ದಿವಸಗಳಲ್ಲಿ ಪೊಲೀಸರಿಗೆ ಆದೇಶ ಸಲುಪಿಸಿರುತ್ತೇನೆ. ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವ ಬಗ್ಗೆ ನ್ಯಾಯಾಲಯದಿಂದ ಆಯುಕ್ತರನ್ನು ಬೇಟಿ ಮಾಡಿರಲಿಲ್ಲ. ಪೊಲೀಸರಿಗೆ ದೂರು ನೀಡುವಾಗ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಲು ಆಯುಕ್ತರನ್ನು ನೇಮಕ ಮಾಡಿರುತ್ತೇನೆ ಎಂದು ಹೇಳಿಲ್ಲ. ನ್ಯಾಯಾಲಯದ ಆದೇಶೀ ಪ್ರತಿವಾದಿಗಳಿಗೂ ಅದೇ ದಿನ ಗೊತ್ತಾಗಿರುತ್ತದೆ. ನ್ಯಾಯಾಲಯದ ಆದೇಶದ ಮೊದಲು ಪ್ರತಿವಾದಿಗಳು ಈ ರೀತಿಯ ಕ್ರಿಮಿನೀಲ್ ಪ್ರಕರಣಗಳನ್ನು ಮಾಡಿದ್ದರು ಎಂದರೆ ಮೊದಲು ಮಾಡಿದ್ದರು. ಆ ಬಗ್ಗೆ ಈ ಹಿಂದೆ ಪೊಲೀಸರಿಗೆ ದೂರು ನೀಡಿದ್ದೆ. ಪೊಲೀಸರು ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ. ಆ ದೂರು ನೀಡಿದ ನಂತರ ಅದರ ಮುಂದಿನ ಕ್ರಮದ ಬಗ್ಗೆ ಪ್ರಯತ್ನ ಪಟ್ಟಿರುತ್ತೇನೆ. ಈ ಹಿಂದೆ ಪೊಲೀಸರಿಗೆ ನೀಡಿದ ದೂರಿನಲ್ಲಿ ಏನು ಕ್ರಮ ಆಗಿದೆ ಎಂದು ಗೊತ್ತಿಲ್ಲ. ನಾನು ಹೇಳಿದ ರೀತಿಯಲ್ಲಿ ಎದುರುದಾರರು ಯಾವುದೇ ರೀತಿಯ ನ್ಯಾಯಾಲಯದ ಆದೇಶೀವನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ.

ಕ್ರಿಮಿನಲ್ ಪ್ರಕರಣ 124/2017 ರ ಮುಂದಿನ ಪ್ರಕ್ರಿಯೆ ಏನು ಆಗಿರುತ್ತದೆ ಎಂದು ಗೊತ್ತಿಲ್ಲ. ಆ ದೂರಿನಲ್ಲಿ ಸ.ನಂ. ಗಳನ್ನು ಹೇಳಲಾಗಿರುತ್ತದೆ. ಅವುಗಳೆಂದರೆ ಕೆ ಕಾಮನಘಟ್ಟದ ಸ.ನಂ.54, 55/2, 17/1, 17/2, 17/3, 17/4, 73, 129, 16, 14, 23. ಸ.ನಂ.129 ರಲ್ಲಿರುವ ಜಾಗದಲ್ಲಿ ಕಳ್ಳತನವಾಗಿರುತ್ತದೆ. ಕಳ್ಳತನವನ್ನು ನಾನು ಕಣ್ಣಾರೆ ನೋಡಿಲ್ಲ. ಯಾರೋ ಹೇಳಿದ ಸುಳ್ಳು ಮಾಹಿತಿ ಆದಾರದಲ್ಲಿ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಕಳ್ಳತನ

ಮಾಡದಿದ್ದರೂ ಸಹ ನನ್ನ ರಾಜಕೀಯ ಪ್ರಭಾವ ಬಳಸಿ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಕ್ರಿಮಿನಲ್ ಪ್ರಕರಣ 124/2017 ರಲ್ಲಿ ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿ ವಿಚಾರಣೆ ಅಂತಿಮ ಹಂತದಲ್ಲಿರುತ್ತದೆ ಎಂದರೆ ಸರಿ. ಆ ಪ್ರಕರಣದಲ್ಲಿ ದೂರುದಾರನಲ್ಲ ಎಂದರೆ ಸರಿ ನನ್ನ ಮಗ ದೂರುದಾರನಾಗಿರುತ್ತಾರೆ. ಈ ಪ್ರಕರಣದಲ್ಲಿ ನಾನು ಅರ್ಜಿ ಸಲ್ಲಿಸಲು ಯಾವುದೇ ಕಾನೂನಿನ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರಕರಣ 124/2017 ರಲ್ಲಿ ಕಳ್ಳತನಕ್ಕೆ ಸಂಬಂಧಿಸಿದಂತೆ ತೆಂಗಿನಕಾಯಿಗಳನ್ನು ವಶಪಡಿಸಿಕೊಂಡಿದ್ದು, ಪಂಚನಾಮೆ ಮಾಡಿದ್ದು , ಅದನ್ನು ಪೊಲೀಸ್ ಠಾಣೆಗೆ ನೀಡಿದ್ದು ಮತ್ತು ದೋಷಾರೋಪಣಾ ಪಟ್ಟಿ ಸಲ್ಲಿಸಿದ ಪ್ರಕ್ರಿಯೆ 5 ದಿವಸದ ಒಳಗೆ ಆಗಿರುತ್ತದೆ. ಈ ಮೇಲಿನ ಕ್ರಿಮಿನಲ್ ಪ್ರಕರಣದಲ್ಲಿ ನನ್ನ ಮಗ ಸಾಕ್ಷಿ ಹೇಳಿರುತ್ತಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ಕೆಲವರು ಸಾಕ್ಷಿ ಆಗಿರುತ್ತದೆ ಇನ್ನೂ ಕೆಲವರ ಸಾಕ್ಷಿ ಬಾಕಿ ರುತ್ತದೆ. ಪ್ರಕರಣ 124/2017ಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಮಗ ಮತ್ತು ಇತರೆ ಸಾಕ್ಷಿದಾರರ ಸಾಕ್ಷಿ ವಿಚಾರಣೆ ಆದ ಬಗ್ಗೆ ನಾನು ದಾಖಲಾತಿಗಳನ್ನು ಇನ್ನೂ ನೀಡಿಲ್ಲ. ಆ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ದಾವೆ ನಡೆಯುತ್ತಿರುವ ಎಲ್ಲಾ ಸರ್ವೆ ನಂಬರ್ ಗಳ ಪಹಣಿಗಳನ್ನು ಕ್ರೈ.ನಂ.124/2017 ರಲ್ಲಿ ಪೊಲೀಸರಿಗೆ ನೀಡಿದ್ದೀರಾ ಎಂದರೆ ಯಾವ ಪಹಣಿ ಕೇಳಿರುತ್ತಾರೋ ಅವುಗಳನ್ನು ನೀಡಿರುತ್ತೇನೆ. ಕಾಮಘಟ್ಟದ ಸ.ನಂ.129,ದಿಡಗ ತುಮಕೂರಿನ 151, 154 ರ ಪಹಣಿಗಳನ್ನು ಪೊಲೀಸರಿಗೆ ನೀಡಿರುತ್ತೇನೆ. ನಾನು ಈ ದಾಖಲೆಗಳನ್ನು ಈ ಅರ್ಜಿಯೊಂದಿಗೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳನ್ನು 129 ಮತ್ತು 151 ಸರ್ವೆ ನಂಬರ್ ಗಳು ಇರುತ್ತವೆ. ಸ.ನಂ.151ರ ಕೊನೆಯ ಪುಟದ ಪಹಣಿ ಮಾತ್ರ ನೀಡಿದ್ದು ಮೊದಲನೇ ಪುಟ ನೀಡಿಲ್ಲ ಎದಂರೆ ನಾನು ಪೊಲೀಸರಿಗೆ ನೀಡಿದ್ದೆ. ಸ.ನಂ.151 ಮತ್ತು 155/4 ರ ಪಹಣಿಗಳು ನಾನು ಪೊಲೀಸರಿಗೆ ದೂರು ನೀಡುವ ಸಮಯದಲ್ಲಿ ನನ್ನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ ನನ್ನ ಮಗನ ಹೆಸರಿನಲ್ಲಿ ಇತ್ತು. ಕ್ರಿಮಿನಲ್ ಪ್ರಕರಣ ದಾಖಲಿಸುವ ಸಮಯದಲ್ಲಿ ಮತ್ತು ಈ ಪ್ರಕರಣದಲ್ಲಿ ಪಹಣಿಗಳು ನನ್ನ ಹೆಸರಿನಲ್ಲಿ ಅಥವಾ ನನ್ನ ಮಗನ ಹೆಸರಿನಲ್ಲಿ ಇದ್ದ ಬಗ್ಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳು ಇಲ್ಲದೇ ಇದ್ದರೂ ಸಹ ನನ್ನ ರಾಜಕೀಯ ಪ್ರಭಾವ ಬೆಳಸಿ ಎದುರುದಾರರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ

ಸರಿಯಲ್ಲ. ನ್ಯಾಯಾಲಯದಲ್ಲಿ ಆದ ಮದ್ಯಂತರ ಆದೇಶದಲ್ಲಿ ಸ.ನಂ.155/4 ಇರಲಿಲ್ಲ. ಸ.ನಂ.155/4 ಕ್ಕೆ ನ್ಯಾಯಾಲಯದ ಆದೇಶ ಇದ್ದರೂ ಸಹ ಯಾವ ಕಾರಣಕ್ಕೆ ಆ ಸರ್ವೆ ನಂಬರ್ ತೋರಿಸಿ ನ್ಯಾಯಾಲಯದ ಆದೇಶ ಇರುತ್ತದೆ ಎಂದು ದೂರು ನೀಡಿದ್ದೀರಿ ಎಂದರೆ ನಾನು ಸರ್ವೆ ನಂ.155/4 ನ್ನು ಸೇರಿಸಿ ದೂರು ನೀಡಿಲ್ಲ. ಎದುರುದಾರರಿಗೆ ಯಾವುದೇ ರೀತಿಯಲ್ಲಿ ತೊಂದರೆ ನೀಡಬೇಕು ಮತ್ತು ತನ್ನ ಹಕ್ಕನ್ನು ಉಳಿಸಿಕೊಳ್ಳಬೇಕು ಎಂದು ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದೂರಿನದ ಆದಾರದಲ್ಲಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ಆದಾರದಲ್ಲಿ ಯಾವುದೇ ಪರಿಹಾರ ಪಡೆಯಲು ಅರ್ಹ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ರೀತಿಯ ನ್ಯಾಯಾಲಯದ ಉಲ್ಲಂಘನೆ ಮಾಡಿರುವುದಿಲ್ಲ ಮತ್ತು ಅವರು ಕಾನೂನನ್ನು ಪಾಲಿಸುವ ವ್ಯಕ್ತಿ ಆಗಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು 5-6 ಪ್ರಕರಣದಲ್ಲಿ ನನ್ನ ತಮ್ಮಂದಿರ ವಿರುದ್ದ ಸಲ್ಲಿಸಿರುತ್ತೇನೆ.5-6 ಪ್ರಕರಣದಲ್ಲಿ ನ್ಯಾಯಾಲಯದ ಆದೇಶ ಆಗುವ ಮೊದಲೇ ಪ್ರಕರಣಗಳು ನಡೆದಿತ್ತು. ನ್ಯಾಯಾಲಯದ ಆದೇಶಕ್ಕಿಂತ ಮೊದಲು ನಡೆದ ಪ್ರಕರಣಗಳ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಪೊಲೀಸರಿಗೆ ದೂರು ನೀಡಿ ತಮ್ಮ ಪೊಲೀಸರು ಈ ಹಿಂದೆ ನೀಡಿದ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಈ ಪ್ರಕರಣದಲ್ಲಿ ನಾನೇ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

ನಾನು ನನ್ನ ಎಲ್ಲಾ ತಮ್ಮಂದಿರ ಮಕ್ಕಳ ವಿರುದ್ದ ಈ ಅರ್ಜಿಯನ್ನು ಸಲ್ಲಿಸಿಲ್ಲ. ಯಾರ ಮಕ್ಕಳು ತೊಂದರೆ ಕೊಟ್ಟಿರುತ್ತಾರೆ ಅವರ ಮಕ್ಕಳ ಮೇಲೆ ಅರ್ಜಿ ಸಲ್ಲಿಸಿರುತ್ತೇನೆ. 6 ನೇ ಪ್ರತಿವಾದಿ ವಿರುದ್ದ ಮಾತ್ರ ಅರ್ಜಿ ಸಲ್ಲಿಸಿರುತ್ತೇನೆ. ಅಸಲು ದಾವಾ ಸಂ.57/2017 ನ್ನು ಕೆಂಪಮ್ಮ ನನ್ನ ವಿರುದ್ದ ವಿಭಾಗಕ್ಕಾಗಿ ನನ್ನ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ಸರಿ. ಕೆಂಪಮ್ಮ ಆಸ್ತಿಗಳಲ್ಲಿ ವಿಭಾಗ ಆಗಿಲ್ಲ ಎಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ, ಅದೇ ರೀತಿ ಈ ಪ್ರಕರಣದಲ್ಲಿ 1 ರಿಂದ 4 ಮತ್ತು 9 ನೇ ಪ್ರತಿವಾದಿಗಳು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ದಾವೆಯಲ್ಲಿ ಪಾಲುಕೇಳುತ್ತಾರೆ ಎಂದು ಈ ರೀತಿ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ನನ್ನೊಂದಿಗೆ ಚೆನ್ನಾಗಿರುತ್ತಾರೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ನನ್ನ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಆದೇಶ ಆದ ದಿನದಿಂದ ಎದುರುದಾರರು ಸದುದ್ದೇಶದಿಂದ ಪಾಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಆದೇಶವನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲಲ.

ಎದುರುದಾರರು ದಾವಾ ಆಸ್ತಿಗಳಿಗೆ ಟ್ರಂಚ್ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದುರುದ್ದೇಶದಿಂದ ನಾನು ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹೇಳಿದ ರೀತಿಯಲ್ಲಿ ಎದುರುದಾರರು ಯಾವುದೇ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ರೀತಿಯ ತೊಂದರೆ ಮಾಡದಿದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ರಾಮಕೃಷ್ಣ ವಿರುದ್ದ ಸಲ್ಲಿಸಿದ್ದ ದೂರಿನ ವಿಚಾರಣೆ ಮುಗಿದಿದೆ ಎಂದರೆ ಇರಬಹುದು. ಆ ದೂರಿನಲ್ಲಿ ಸಹ ಇದೇ ಅಂಶಗಳನ್ನು ಇಟ್ಟು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ಮೂರನೇ ಎದುರುದಾರರು ನಿರಪರಾಧಿ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ರಾಮಕೃಷ್ಣ ಇರುವುದಿಲ್ಲ. ಕ್ರೈ.ನಂ.124/2017 ರಲ್ಲಿ ಎದುರುದಾರರು ಅಪರಾದಿಯೋ ಅಥವಾ ನಿರಪರಾದಿಯೋ ಎಂದು ಇನ್ನೂ ನಿರ್ದರಿಸಿಲ್ಲ. ಸುಳ್ಳು ಸಾಕ್ಷಿಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ದಿನವಸ-

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.